ನಾವು ನಿತ್ಯ ಹಾಯಲೇಬೇಕಾದ ಅಗ್ನಿದಿವ್ಯವಾದಾಗ ಅದು ಕಾಣಿಸುತ್ತಾ ಹೋಗುವ ದರ್ಶನಗಳಿಗೆ ಕಡು ಸಂಕೀರ್ಣತೆಯ ಆಯಾಮಗಳು ತನ್ನಿಂತಾನೇ ಒದಗಿಬರುತ್ತವೆ.

ಹುಟ್ಟಿದೂರಿನಿಂದ, ಬೆಳೆದ ಊರಿನಿಂದ, ಓದುವ ಊರಿಗೆ ನನ್ನ ಪ್ರಯಾಣ ಬೆಳೆಯಿತು. ಹೈದರಾಬಾದ್ ಕರ್ನಾಟಕದ ನಮ್ಮ ಭಾಗದಲ್ಲಿ ಓದುವ ಊರು ಎಂದ ತಕ್ಷಣ ವಿದ್ಯಾಕಾಶಿ ಧಾರಾವಾಡವೇ ನೆನಪಾಗುತ್ತದೆ. 'ಓದೋ ಮಕ್ಕಳಿಗೆ ಧಾರ್ವಾಡ ಭಾಳ ಭೇಷಿ!' ಎಂಬ ಮಾತು ನಮ್ಮ ಭಾಗದ ಊರುಗಳಲ್ಲಿ ಜನಜನಿತವಾಗಿತ್ತು. ಹಾಗೆ ಧಾರವಾಡ ಸೇರಿದ ಮೇಲೂ ನನ್ನ ಮೊದಲ ಆಕರ್ಷಣೆ ಕೆಂಪು ಬಣ್ಣದ ಸಿಟಿ ಬಸ್ಸುಗಳೇ ಆಗಿದ್ದವು. ಹುಬ್ಬಳ್ಳಿ ಧಾರವಾಡದ ತಗ್ಗುಗುಂಡಿ ರಸ್ತೆಗಳಲ್ಲಿ, ಸದಾ ದೂಳೆಬ್ಬಿಸುವ ಅದರ ಪವಾಡ ಮಹಿಮೆಗೆ ಕೈ ಮುಗಿಯುತ್ತಾ ಕುಲುಕುತ್ತಾ ಪ್ರಯಾಣಿಸುವುದು, ಎಲೆ ಅಡಿಕೆ ತಿಂದು ಪಿಚುಕ್ ಪಿಚುಕ್ ಉಗಿಯೋ ಅಲ್ಲಿನ ಕೆಲವು ಜನರ ಕಣ್ಣುಗಳಲ್ಲಿನ ಜೀವನ್ಮುಖಿ ಹೊಳಪನ್ನು ನೋಡಿ ಖುಷಿ ಪಡುತ್ತಾ ಅಂತೆಯೇ ಊರನ್ನು ಉಗುಳಿಟ್ಟ ಕಲೆಗಳ ಐತಿಹಾಸಿಕ ಸ್ಥಳವನ್ನಾಗಿಯೂ ಮಾಡುವ ಅವರ ರೂಢಿಗೆ ಪಿಚ್ಚೆಂದುಕೊಳ್ಳುತ್ತಾ ಸಾಗುವುದಿರುತ್ತಿತ್ತು. ಕಾಲೇಜು ದಿನಗಳಲ್ಲಿ ಉಣಕಲ್ ಕೆರಿ, ಆಗ ಇದ್ದ ಒಂದೇ ಒಂದು ಮಾಲ್ ಆಗಿದ್ದ ಯು ಮಾಲ್, ಧಾರವಾಡದ ನುಗ್ಗಿಕೇರಿ, ಹನುಮಪ್ಪನ ಗುಡಿ, ಸಾಧನಕೇರಿಯ ಬೇಂದ್ರೆ ಅಜ್ಜನ ಮನಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಪು ಸಭಾಂಗಣ, ರಂಗಾಯಣ, ಸಂಗಮ ಥಿಯೇಟರ್, ಲಕ್ಷ್ಮಿ ಥಿಯೇಟರುಗಳೆಂಬ ಶಕ್ತಿ ಕೇಂದ್ರಗಳನ್ನು ಬೆಸೆಯಲು ಬಸ್ಸು ನಮಗೆ ಮಂತ್ರದಂಡವಾಗುತ್ತಿತ್ತು. ಭಾನುವಾರಗಳಂದು ಬೇಂದ್ರೆ ಬಸ್ಸಿನಲ್ಲಿ ಕುಳಿತು ಊರು ಸುತ್ತಿ ಒಂದೇ ದಿನ ನಾಲ್ಕಾರು ಕಾರ್ಯಕ್ರಮಗಳನ್ನು ಮುಗಿಸಿ ಮನೆ ಮುಟ್ಟಬಹುದಿತ್ತು. ಅಲ್ಲಿನ ಲೆಸ್ ಟ್ರಾಫಿಕ್ ಅದಕ್ಕೆ ಅವಕಾಶವನ್ನೀಯುತ್ತಿತ್ತು. ಈಗ ಬೇಂದ್ರೆ ಬಸ್ ನಿಂತುಹೋಗಿ ಚಿಗರಿಗಂಗಳ ಚೆಲುವಿ ಧಾರವಾಡದ ಊರತುಂಬಾ ಆವರಿಸಿದ್ದಾಳೆ. ಈಗಲ್ಲಿ ಸುಸಜ್ಜಿತ ಬಸ್ ಮಾರ್ಗವೇ ಸಜ್ಜಾಗಿ ಅದರಲ್ಲಿ ಚಿಗರಿಯ ಚಲಿಸಾಟ ನಡೆದಿದೆ. ಬೇಂದ್ರೆ ಬಸ್ಸು ನಮ್ಮ ಕಾಲದ ನೆನಪಾಗಿ ಉಳಿದುಹೋಗಿದೆ.

ಬಸ್ಸಿಗೆ ಸೀಟು ಹಿಡಿಯುವುದು ಕೂಡ ಒಂದು ಕಲೆ ಎನ್ನುವುದು ನಾನು ಕಂಡುಕೊಂಡಿರುವ ಸತ್ಯ. ಕಲೆ ಎಂದರೆ ಹಳ್ಳಿಗಳ ಕಡೆ ನೈಪುಣ್ಯತೆ ಅಥವಾ ಬುದ್ಧಿವಂತಿಕೆ ಎನ್ನುವ ಅರ್ಥದಲ್ಲಿಯೇ ಬಳಸುವುದು ರೂಢಿ. ಅದೇ ಅರ್ಥದಲ್ಲಿ 'ಭಾಳ ಕಲಾಕಾರ ಅದಾನ ನೋಡು!' ಎನ್ನುವುದರ ಹಿಂದಿನ ಅರ್ಥ ಆಂತರ್ಯದಲ್ಲಿ 'ಬಹಳ ಜಾಣ ಇದ್ದಾನೆ ನೋಡು' ಅಥವಾ 'ಬಹಳ ತಿಳಿದುಕೊಂಡಿದ್ದಾನೆ ನೋಡು' ಎನ್ನುವುದೇ ಆಗಿದೆ. ಅತೀವ ಜನಸಂದಣಿಯಿರುವ ಬಸ್ಸು ಸ್ಟ್ಯಾಂಡಿಗೆ ಬಂದು ನಿಂತಾಗ ಓಡಿ ಹೋಗಿ ಎಡಬದಿಗೆ ನಿಂತು ಜನ ಇಳಿದ ಕೂಡಲೇ ಹತ್ತಿಬಿಡುವುದು, ಚಿಲ್ಲರೆ ಆಮೇಲೆ ಕೊಡುತ್ತೇನೆ ಎಂದು ಮರೆತಂತೆ ಮಾಡುವ ಕೆಲವು ಚಾಲಾಕಿ ಕಂಡಕ್ಟರ ಬಳಿ ಮರೆಯದೆ ದುಡ್ಡು ವಾಪಸು ಇಸಿದುಕೊಳ್ಳುವುದು ನಾಜೂಕಾಗಿ ಮಾಡಬೇಕಾದ ನೈಪುಣ್ಯದ ಕೆಲಸ. ಈ ಕೆಲಸ ಒಮ್ಮೊಮ್ಮೆ ನನಗೆ ಕಣ್ಣಾಮುಚ್ಚಾಲೆಯಾಟದಲ್ಲಿ ಅಡಗಿಕೊಂಡವರ ಹಿಡಿದು 'ಔಟ್' ಎಂದು ಕೂಗಿದಾಗ ಲಭಿಸುವ ತುಂಟ ಖುಷಿಯ ಬಿಂಬದಂತೆನಿಸುತ್ತದೆ. ಎಷ್ಟೋ ಸಲ ಬಸ್ಸಿಗಾಗಿ ಕಾಯುವುದು ಕೂಡ ನಮ್ಮ ತಲೆಯಲ್ಲಿ ಸುಳಿದು ಹೋಗುವ ಹಲವು ಯೋಚನೆಗಳ ನಿಕಷದ ಯಜ್ಞಸಮಯದಂತೆ ನನಗೆ ಕಾಣುತ್ತದೆ. ಅದರಲ್ಲಿ ಬಸ್ಸು ದಿನಾ ಬರುವ ಸಮಯದ ಆಚೆ ಈಚೆ ಬಂದರೂ ಸಹ 'ಅಯ್ಯೋ.. ಬಸ್ ಬರದೇ ಹೋದರೆ?!' 'ಸೀಟು ಸಿಕ್ಕದೆ ಹೋದರೆ?!' 'ಬಸ್ ಪ್ರಯಾಣದ ನಡುವೆ ಶೌಚಕ್ಕೆ ಅವಸರವಾಗಿ ಹೋದರೆ?' 'ಬಸ್ಸಿನಲ್ಲಿ ನಿದ್ದೆ ಹೋಗಿಬಿಟ್ಟರೆ?' ಎನ್ನುವ ಐಹಿಕ ಭಯದ ವಿಷಯಗಳೂ ಹಾದು ಎದೆಯ ಬಡಿತ ಹೆಚ್ಚಾಗುವ ಪ್ರಸಂಗಗಳೂ ಇರುತ್ತವೆ. ಮತ್ತೊಮ್ಮೆ ಬಸ್ಸಿಗಾಗಿ ಕಾಯುವುದು ಕೂಡ ಒಳ್ಳೆಯ ಕೆಲಸವಾಗುವುದಕ್ಕಾಗಿ ಕಾಯುವ ತಲ್ಲಣದ ಮಿನಿಸ್ವರೂಪದಂತೆ ನನಗೆ ಗೋಚರಿಸುತ್ತದೆ.

ಬಸ್ಸಿನಲ್ಲಿನ ಜನರನ್ನು ನಿಂತವರು ಮತ್ತು ಕೂತವರೆಂದು ನಾವು ವಿಂಗಡಿಸುವುದಾದರೆ ನಿಂತವರು 'ಕೂತವರು ಎಷ್ಟು ಹೊತ್ತಿಗೆ ಏಳುತ್ತಾರೋ?!' ಎಂದು ಆಸೆಗಣ್ಣಿನಿಂದ ಕಾಯುತ್ತಾರೆ. 'ಅವರ ನಿಲ್ದಾಣ ಬೇಗನೆ ಬಂದು ನಮಗೆ ಸೀಟು ಸಿಕ್ಕಿಬಿಡಲಿ ದೇವರೇ!' ಎಂದು ಪ್ರಾರ್ಥಿಸುತ್ತಾರೆ. ನಿಂತವರ ಎದೆಯೊಳಗೆ 'ತಮ್ಮದೂ ಅಲ್ಲದ ಯಾವ